**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ. 542/2019</u>**

ದಿನಾಂಕಃ **17.10.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ಉಮೇಶ | ಚಾಸಾ-7, ಪ್ರಾಸ.-6 |
| ತಂದೆಯ ಹೆಸರುಃ | ನಾಗರಾಜೇಗೌಡ | |
| ವಯಸ್ಸು ಃ | 47 ವರ್ಷ | |
| ಉದ್ಯೋಗ ಃ | ಚಾಲಕ | |
| ವಾಸ ಃ | ಜೋಡಿತಿಮ್ಮಾಪುರ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ಮೃತ ವ್ಯಕ್ತಿ ನನಗೆ ಗೊತ್ತು. ಚಾಸಾ-1 ರಿಂದ 6 ರವರು ನನಗೆ ಗೊತ್ತು ಅವರು ನಮ್ಮ ಊರಿನವರು. ಸುಮಾರು 6 ವರ್ಷಗಳ ಹಿಂದೆ ನಾನು ಬೀರೂರಿನಿಂದ ಜೋಡಿತಿಮ್ಮಾಪುರಕ್ಕೆ ಸಂಜೆ 5.30 ರಿಂದ 6.00 ಗಂಟೆ ಸಮಯದಲ್ಲಿ ಹೋಗುತ್ತಿರುವಾಗ ಬೀರೂರಿನ 2 ನೇ ರೈಲ್ವೆ ಗೇಟ್ ಬಳಿ ಸಾರ್ವಜನಿಕರು ಸೇರಿದ್ದರು. ನಾನು ಹೋಗಿ ನೋಡಿದಾಗ ಸಾರ್ವಜನಿಕರು ಹಾಗೂ ಪೋಲಿಸರು ಸೇರಿದ್ದರು. ಅಲ್ಲಿ ಅಪಘಾತವಾಗಿತ್ತು. ನಾನು ನೋಡಿದಾಗ ಮೃತ ವ್ಯಕ್ತಿ ಇರಲಿಲ್ಲ. ಅಪಘಾತವನ್ನು ನಾನು ನೋಡಿರುವುದಿಲ್ಲ. ಅಪಘಾತ ಹೇಗೆ ಆಯಿತು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಅಪಘಾತವು ಲಾರಿ ಚಾಲಕನ ತಪ್ಪಿನಿಂದ ಆಗಿರುತ್ತದೆ. ಸ್ಥಳದಲ್ಲಿ ಲಾರಿ ನಿಂತಿತ್ತು. ನಾನು ಲಾರಿ ಚಾಲಕನನ್ನು ನೋಡಿರುವುದಿಲ್ಲ. ಆತನು ಸ್ಥಳದಲ್ಲಿ ಇರಲಿಲ್ಲ. ಲಾರಿ ಚಾಲಕನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿ ಅಪಘಾತಪಡಿಸಿರುತ್ತಾನೆ ಎಂದು ನಾನು ಕೇಳಿ ತಿಳಿದುಕೊಂಡಿರುತ್ತೇನೆ. ಮೃತ ವ್ಯಕ್ತಿಯನ್ನು ಅಪಘಾತದ ನಂತರ ನೋಡಿರುವುದಿಲ್ಲ. ಈ ಸಂಬಂಧ ನಾನು ಪೋಲಿಸರಿಗೆ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ಬಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)

<u>ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ</u>

ದಿಃ 24.08.2017 ರಂದು ನಾನು ನಮ್ಮ ಊರಿನ ದೇವಸ್ಥಾನದ ಬಳಿ ಇರುವಾಗ ತಿಮ್ಮರಾಯಪ್ಪ ರವರ ಮನೆ ಹತ್ತಿರ ಅಳುವ ಶಬ್ದ ಕೇಳಿ ಅಲ್ಲಿಗೆ ಹೋಗಿ ನೋಡಿದಾಗ ಅವರ ಮಗ ಕಾಂತರಾಜು ರವರಿಗೆ ಜೋಡಿತಿಮ್ಮಾಪುರ ಗೇಟ್ ಬಳಿ ಅಪಘಾತವಾಗಿರುವ ವಿಚಾರ ನನಗೆ ತಿಳಿಯಿತು ಎಂದರೆ ಸರಿ. ನಂತರ ನಾನು ಮತ್ತು ನಮ್ಮ ಊರಿನ ಜನರೊಂದಿಗೆ ಹೋಗಿ ನೋಡಿದಾಗ ಅಲ್ಲಿದ್ದ ಚಾಸಾ-2 ರವರಿಂದ ಅಪಘಾತದ ಬಗ್ಗೆ ಮಾಹಿತಿ ಪಡೆದಿರುತ್ತೇನೆ ಎಂದರೆ ಸರಿ. ಚಾಸಾ-2 ರವರು ನಮಗೆ ಮಾಹಿತಿ ತಿಳಿಸಿದಂತೆ ಸಂಜೆ 6.10 ಗಂಟೆ ಸಮಯಕ್ಕೆ ಎನ್ ಹೆಚ್ 206 ರ ರಸ್ತೆಯಲ್ಲಿರುವ ಬಿ ಜಿ ಎಸ್ ಶಾಲೆ ಮುಂಭಾಗದಲ್ಲಿ ಮೃತ ವ್ಯಕ್ತಿಯು ಜೋಡಿತಿಮ್ಮಾಪುರ ಕಡೆಯಿಂದ ಬೀರೂರು ಕಡೆಗೆ ರಸ್ತೆಯ ಎಡಬದಿಯಲ್ಲಿ ಪೂರ್ವ ದಿಕ್ಕಿನ ಅಂಚಿನಿಂದ

ಸುಮಾರು 3 ಅಡಿ ದೂರದಲ್ಲಿ ನಡೆದುಕೊಂಡು ಹೋಗುತ್ತಿರುವಾಗ ಲಾರಿಯನ್ನು ಅದರ ಚಾಲಕ ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಕಾಂತರಾಜು ರವರಿಗೆ ಡಿಕ್ಕಿಪಡಿಸಿದ ಪರಿಣಾಮ ಆತನು ರಸ್ತೆ ಮೇಲೆ ಬಿದ್ದು ಲಾರಿಯು ಆತನ ಮೇಲೆ ಹರಿದು ಹೋದ ಪರಿಣಾಮ ಸೊಂಟದಿಂದ ಪಾದದವರೆಗೆ ದೇಹದ ಸಂಪೂರ್ಣ ಮೂಳೆಗಳು ಪುಡಿ ಪುಡಿಯಾಗಿ ಮಾಂಸ ಎಲ್ಲಾ ಮುದ್ದೆಯಾಗಿರುತ್ತದೆ, ಕೈ ಕಾಲುಗಳಿಗೆ ಗಾಯಗಳಾಗಿರುತ್ತದೆ ಎಂಬ ವಿಚಾರ ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ಸದರಿ ಲಾರಿಯ ಸಂಖ್ಯೆ ಟಿಎನ್-34 ಕ್ಯೂ-6710 ರ 10 ಚಕ್ರದ ಲಾರಿಯಾಗಿತ್ತು ಎಂದರೆ ಸರಿ. ಮೃತ ವ್ಯಕ್ತಿಯನ್ನು 108 ಅಂಬುಲೆನ್ಸ್‌ನಲ್ಲಿ ಬೀರೂರಿನ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿರುವಾಗ ಮೃತಪಟ್ಟಿರುತ್ತಾರೆ ಎಂದರೆ ಸರಿ. ಅಪಘಾತಕ್ಕೆ ಲಾರಿ ಚಾಲಕನ ಅತೀವೇಗ ಮತ್ತು ಅಜಾಗರೂಕತೆಯ ಚಾಲನೆಯೇ ಕಾರಣ ಎಂದರೆ ಸರಿ.

ಪಾಟೀಸವಾಲು: ಶ್ರೀ ವೈ ಟಿ ಎಂ. ಆರೋಪಿ ಪರ ವಕೀಲರಿಂದ:

ಅಪಘಾತದ ವಿಚಾರ ಚಾಸಾ-2 ರವರು ಹೇಳಿದ ನಂತರ ತಿಳಿಯಿತು ಎಂದರೆ ಸರಿ. ಲಾರಿ ಚಾಲಕನನ್ನು ನಾನು ನೋಡಿಲ್ಲ ಎಂದರೆ ಸರಿ. ಅಪಘಾತಪಡಿಸಿದ ವಾಹನ ಸಂಖ್ಯೆ ನನಗೆ ಗೊತ್ತಿಲ್ಲ ಎಂದರೆ ಸರಿ. ಪೋಲಿಸರಿಗೆ ನಾನು ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲಾ ಎಂದರೆ ಸರಿ.

ಮರು ವಿಚಾರಣೆ : ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.